ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು–560 056


ಸಂಖ್ಯೆ. ಎಸಿಎ–2/ವಿ.ವಿ.ಪ.ವಿ ಸಭೆ/2019–20

ದಿನಾಂಕ: 21/11/2019

ಗೆ.
ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು–56.

ವಿಷಯ: ದಿನಾಂಕ: 11/11/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 11/11/2019ರಂದು ಮಧ್ಯಾಹ್ನ 3.30 ಘಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.19ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ತಮ್ಮ ವಿಶ್ವಾಸಿ,

ಕುಲಸಚಿವರು.
21/11/2019

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸಿಎ-2/ಎ2/ವಿ.ವಿ.ಪ./ವಿ.ಸ/2019-20

ದಿನಾಂಕ: 21-11-2019

ದಿನಾಂಕ: 11-11-2019ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಆಡಳಿತ ವಿಭಾಗದ ಸನೆಟ್ ಸಭಾಂಗಣದಲ್ಲಿ ಮಧ್ಯಾಹ್ನ 3.30 ಘಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳು. ಕೋರಂ ಕೋರತೆಯಿಂದ ಸಭೆಯನ್ನು 30 ನಿಮಿಷ ಮುಂದೂಡಲಾಯಿತು. ಮುಂದೂಡಿದ ಸಭೆಯನ್ನು 3.30ಕ್ಕೆ ಪ್ರಾರಂಭಿಸಲಾಯಿತು.

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ. ಆರ್. ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಅನುರಾಧ. ಎಂ. ಪ್ರಾಂಶುಪಾಲರು | ಸದಸ್ಯರು |
| 3. | ಶ್ರೀ ಜಿ.ಆರ್. ಸುಧಾಕರ. ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀ ದೇವೇಂದ್ರ ಕುಮಾರ ಪಾಠಕ್. ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಹೆಚ್. ಆರ್. ಕುಮಾರಸ್ವಾಮಿ. ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ಜಯರಾಮ. ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಮೊಹಮ್ಮದ್ ಅಫ್ಜಲ್ ಪಾಷ. ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | ಸದಸ್ಯರು |
| 8. | ಡಾ. ಎಲ್. ಗೋಮತಿದೇವಿ. ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸದಸ್ಯರು |
| 9. | ಡಾ. ವೈ. ನಾಗರಾಜು. ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 10 | ಡಾ. ಎಮ್. ರಾಮಚಂದ್ರ ಮೋಹನ್. ಡೀನರು, ವಿಜ್ಞಾನ ಮತ್ತು ತಾಂತ್ರಿಕ ನಿಕಾಯ | ಸದಸ್ಯರು |
| 11. | ಶ್ರೀ ಮಧುಚಂದ್ರ. ಜಿ. | ಸದಸ್ಯರು |
| 12 | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 13 | ನಿರ್ದೇಶಕರು, ಪಿ.ಎಮ್.ಇ.ಬಿ, ಬೆಂ.ವಿ.ಬೆಂ. | ಸದಸ್ಯರು |
| 14 | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಬೆಂ.ವಿ.ಬೆಂ. | ಸದಸ್ಯರು |
| 15 | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 16 | ಡಾ. ಶಿವರಾಜು. ಸಿ. ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17 | ಶ್ರೀಮತಿ ಹೆಚ್.ಪಿ. ಪಾರ್ವತಿ. ವಿತ್ತಾಧಿಕಾರಿಗಳು | ಸದಸ್ಯರು |
| 18 | ಡಾ. ಬಿ.ಕೆ. ರವಿ. ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಮಾನ್ಯ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು ಹಾಗೂ ಸಭೆಯನ್ನು ನಡೆಸಿಕೊಡುವಂತೆ ಕುಲಪತಿಗಳನ್ನು ವಿನಂತಿಸಿದರು.

ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೂ ಮತ್ತೊಮ್ಮೆ ಸ್ವಾಗತವನ್ನು ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

**<u>ವಿಷಯ ಸಂಖ್ಯೆ 1:</u>** ಬೆಂಗಳೂರು ವಿಶ್ವವಿದ್ಯಾಲಯದ 54ನೇ ಮಿನಿ ಘಟಿಕೋತ್ಸವದಲ್ಲಿ ಉಪಸ್ಥಿತರಿರದ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

**<u>Resolution:</u>** After detailed discussions, the Academic Council resolved to approve the Eligibility List and Presentation List of candidates admitted to the various degrees under the Faculties of Arts, Science, Commerce, Law, Education and Engineering, as submitted to the house. Afterwards, the ceremonial procedures of the Mini-Convocation was held as per relevant Statutes of Bangalore University.

**<u>ವಿಷಯ: ಸಂಖ್ಯೆ:2:</u>** ಬಿಡದಿಯ ದಲಯ್ ಲಾಮಾ ಇನ್ಸಿಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್‌ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66ರನ್ವಯ ಮನ್ನಣೆ ನೀಡುವ ಬಗ್ಗೆ ಪರಿಣಿತಿ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಗಣಿಸುವ ಬಗ್ಗೆ.

**<u>ನಿರ್ಣಯ:</u>** ಚರ್ಚೆಯ ನಂತರ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66(1)ರ ಅನ್ವಯ ಬೆಂಗಳೂರು ವಿಶ್ವವಿದ್ಯಾಲಯದಿಂದ ಇನ್ಸಿಟಿಟ್ಯೂಟ್‌ಷನ್ ಫಾರ್ ಸ್ಪೆಷಲೈಸ್ಡ್ ಸ್ಟಡೀಸ್ ಎಂದು ಮಾನ್ಯತೆ ಪಡೆದಿರುವ ಬಿಡದಿಯ ದಲಯ್ ಲಾಮಾ ಇನ್ಸಿಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್, ಇಲ್ಲಿ ಬಿ.ಎ. (ಟಿಬೇಟನ್ ಲ್ಯಾಂಗ್ವೇಜ್ ಅಂಡ್ ಸ್ಟಡೀಸ್ ಅಂಡ್ ಲಿಟ್ರೇಚರ್) ಕೋರ್ಸನ್ನು 60 (ಅರವತ್ತು) ವಿದ್ಯಾರ್ಥಿ ಪ್ರಮಾಣದೊಂದಿಗೆ 2019–20ನೇ ಸಾಲಿನಿಂದ ನಡೆಸಲು ಮಾನ್ಯತೆಯನ್ನು ನೀಡುವ ಬಗ್ಗೆ ಪ್ರೊ. ಅಶ್ವತ್ಥನಾರಾಯಣ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಇವರ ಅಧ್ಯಕ್ಷತೆಯಲ್ಲಿನ ಪರಿಣಿತಿ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

**<u>ವಿಷಯ: ಸಂಖ್ಯೆ:3:</u>** ಜೈನ್ ಕಾಲೇಜಿನ ಜನವರಿ 2019ರ ಎಂ.ಎ. ಅರ್ಥಶಾಸ್ತ್ರ, ಮೂರನೇ ಸೆಮಿಸ್ಟರ್ ಎಂಟು ವಿದ್ಯಾರ್ಥಿಗಳ **Open Elective** ಪತ್ರಿಕೆಯ ಫಲಿತಾಂಶವನ್ನು ನೀಡುವ ಬಗ್ಗೆ.

2017–18ನೇ ಸಾಲಿನಲ್ಲಿ ಜೈನ್ ಕಾಲೇಜಿನಲ್ಲಿ ಎಂ.ಎ. ಅರ್ಥಶಾಸ್ತ್ರ, ಪ್ರವೇಶ ಪಡೆದ ವಿದ್ಯಾರ್ಥಿಗಳು Open Elective HRD ವಿಷಯದ ಬದಲು Economics of Globalization ವಿಷಯದ ಮೇಲೆ ಪರೀಕ್ಷೆ ಬರೆದಿದ್ದು ಅವರ ಫಲಿತಾಂಶ ಬಿಡುಗಡೆಯ ಬಗ್ಗೆ ಪ್ರಾಂಶುಪಾಲರು ಕೋರಿರುವ ವಿಷಯವನ್ನು ಕುಲಸಚಿವರು (ಮೌಲ್ಯಮಾಪನ) ಸಭೆಗೆ ತಿಳಿಸಿದರು.

ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ನಂತರ ಯಾವ ವಿದ್ಯಾರ್ಥಿಗಳ ಯಾವ Open Elective ವಿಷಯವನ್ನು ಅಧ್ಯಯನ ಮಾಡಬೇಕೆಂದು ಜೈನ್ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ತಿಳಿಸಿರುವುದೇ ಇಲ್ಲ. ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆಗೆ ಬೇಡಿಕೆಯಲ್ಲಿರುವ HRD ವಿಷಯವು ವಿಶ್ವವಿದ್ಯಾಲಯದಿಂದ ಅನುಮೋದಿತವಾಗಿರುವ Open Elective ವಿಷಯಗಳ ಪಟ್ಟಿಯಲ್ಲಿಯೂ ಇರುವುದಿಲ್ಲ. ಅಲ್ಲದೇ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ Economics of Globalization ವಿಷಯದ Open Elective ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟು ಉತ್ತರ ಬರೆಸಿದ್ದು ಸರಿಯಾದ ಕ್ರಮವಾಗಿರುವುದಿಲ್ಲ. ಮುಂದುವರೆದು, ಎಂ.ಎ. ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಅರ್ಥಶಾಸ್ತ್ರದ ವಿಷಯದ್ದೇ ಆದ ಮತ್ತೊಂದು ವಿಷಯವನ್ನು Open Elective ಆಗಿ ಆಯ್ಕೆ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು Economics of Globalization ವಿಷಯದ ಪರೀಕ್ಷೆ ಬರೆದಿರುವುದು ಅಸಿಂಧು ಎಂದು ಪರಿಗಣಿಸಿ ಜೈನ್ ಕಾಲೇಜಿನ ಪ್ರಾಂಶುಪಾಲರಿಗೆ ದಂಡ ವಿಧಿಸುವಂತೆ ಸದಸ್ಯರು ಒತ್ತಾಯಿಸಿದರು.

<u>ನಿರ್ಣಯ:</u> ಸುಧೀರ್ಘ ಚರ್ಚೆಯ ನಂತರ ಸದರಿ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ **ಅಥವಾ** 2020ರ ಜನವರಿಯಲ್ಲಿ ನಡೆಯಲಿರುವ ಮೂರನೇ ಸೆಮಿಸ್ಟರ್ ಪರೀಕ್ಷಾ ಸಮಯದಲ್ಲಿ ನಿಯಮಗಳನುಸಾರ ವಿಶ್ವವಿದ್ಯಾಲಯದ ಅನುಮೋದಿತ ಪಟ್ಟಿಯಲ್ಲಿರುವ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲು ನಿರ್ಣಯಿಸಲಾಯಿತು. ಸದರಿ ಪರೀಕ್ಷೆಯ ಅಂಕಗಳನ್ನು ಜನವರಿ 2019ರಲ್ಲೇ ನಡೆದ ಮೂರನೇ ಸೆಮಿಸ್ಟರ್ ಪತ್ರಿಕೆಗಳ ಅಂಕಪಟ್ಟಿಯಲ್ಲೇ ಸೇರಿಸಿ ಫಲಿತಾಂಶ ಪ್ರಕಟಿಸಲು ನಿರ್ಣಯಿಸಲಾಯಿತು. ಮುಂದುವರಿದು, ವಿಶ್ವವಿದ್ಯಾಲಯದ ನಿಯಮಗಳ ಅರಿವಿಲ್ಲದೇ ತಪ್ಪುಗಳನ್ನು ಎಸಗಿರುವ ಕಾಲೇಜಿಗೆ ಸೂಕ್ತ ದಂಡ ವಿಧಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

<u>ವಿಷಯ: ಸಂಖ್ಯೆ:4:</u> 2019–20ನೇ ಶೈಕ್ಷಣಿಕ ಸಾಲಿಗೆ ರಾಮನಗರದ ಶಾಂತಿನಿಕೇತನ ಕಾಲೇಜ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್‌ಗೆ ಬಿ.ಇಡಿ. ಇಂಟಿಗ್ರೇಟೆಡ್ ಕೋರ್ಸುಗಳ ಹೊಸ ಸಂಯೋಜನೆ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ ವರದಿಯನ್ನು ಪರಿಗಣಿಸುವ ಬಗೆಗೆ.

ನಿರ್ಣಯ: ಚರ್ಚೆಯ ನಂತರ, 2019–20ನೇ ಶೈಕ್ಷಣಿಕ ಸಾಲಿಗೆ ರಾಮನಗರದ ಶಾಂತಿನಿಕೇತನ ಕಾಲೇಜ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ಗೆ ಬಿ.ಎ.–ಬಿ.ಇಡಿ. ಮತ್ತು ಬಿ.ಎಸ್ಸಿ.–ಬಿ.ಇಡಿ. ಇಂಟಿಗ್ರೇಟೆಡ್ ಕೋರ್ಸುಗಳ ಹೊಸ ಸಂಯೋಜನೆ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ ವರದಿಯನ್ನು ಕೆ.ಎಸ್.ಯು. ಅಧಿನಿಯಮ 59(8)ರ ಅಡಿಯಲ್ಲಿ ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ವಿಷಯ: ಸಂಖ್ಯೆ:5: To consider starting a new Course in **B.A. Tibetan Studies (I to VI Semesters)** from the Academic Year 2019-20 at The Dalai Lama Institute for Higher Education, Bangalore.

ನಿರ್ಣಯ: Academic Council resolved to approve the Syllabus and Scheme of Examination of B.A. Tibetan Studies (I to VI Semesters) under Semester Scheme (CBCS) run by The Dalai Lama Institute for Higher Education, Bangalore effective from the Academic year 2019-20, pending approval by the Faculty of Arts.

ವಿಷಯ: ಸಂಖ್ಯೆ:6: ಮೇ/ಜೂನ್ 2018ರ ಪದವಿ ಪರೀಕ್ಷೆಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ನೀಡುವ ಬಗ್ಗೆ.

ಪ್ರಾಂಶುಪಾಲರು, ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು ಇವರ ಪತ್ರ ದಿನಾಂಕ: 06/08/2019ರಲ್ಲಿ ಮೇ/ಜೂನ್ 2018ರ ಬಿ.ಎ. ಪದವಿಯಲ್ಲಿ ಸಹಪಠ್ಯ ಮತ್ತು ವಿಸ್ತರಣಾ ಚಟುವಟಿಕೆಗಳು (Co-curricular and Extension activities) ವಿಷಯದಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಲಗತ್ತಿಸಿ, ಈ ವಿದ್ಯಾರ್ಥಿಗಳಿಗೆ ಸದರಿ ವಿಷಯದಲ್ಲಿ 20ಕ್ಕಿಂತ ಕಡಿಮೆ ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕಾಗಿ ನೀಡಲಾಗಿರುತ್ತದೆ ಹಾಗೂ ಸದರಿ ವಿದ್ಯಾರ್ಥಿಗಳನ್ನು ಅನುತ್ತೀರ್ಣರಾಗಿರುತ್ತಾರೆ ಎಂದು ಫಲಿತಾಂಶವನ್ನು ವಿಶ್ವವಿದ್ಯಾಲಯವು ಬಿಡುಗಡೆ ಮಾಡಿರುತ್ತದೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸಿಬಿಸಿಎಸ್ ನಿಯಮಾವಳಿಯಲ್ಲಿ ಕ್ರಮ ಸಂಖ್ಯೆ.10.09 ಪುಟ 11ರಲ್ಲಿ "There shall be no minimum in respect of Internal Assessment Marks" ಎಂದು ನಮೂದಾಗಿರುತ್ತದೆ. Co-curricular and Extension activities ವಿಷಯಕ್ಕೆ ಸಂಪೂರ್ಣವಾಗಿ ಆಂತರಿಕ ಮೌಲ್ಯಮಾಪನ ಪರೀಕ್ಷಾ ಪದ್ಧತಿ ಮಾತ್ರ ಇದ್ದು, ಈ ವಿಷಯದಲ್ಲಿ ಕನಿಷ್ಠ ಅಂಕಗಳನ್ನು ನಿಗದಿ ಮಾಡಿರುವುದಿಲ್ಲ. ಸದರಿ ನಿಯಮಾವಳಿಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳ ಸದರಿ ವಿಷಯದಲ್ಲಿ ಉತ್ತೀರ್ಣ ಎಂದು ಘೋಷಿಸಿ ಫಲಿತಾಂಶವನ್ನು ಬಿಡುಗಡೆ ಮಾಡಿ ಹೊಸ ಅಂಕಪಟ್ಟಿಗಳನ್ನು ನೀಡಬೇಕೆಂದು ಪ್ರಾಂಶುಪಾಲರು ಮನವಿ ಪತ್ರವನ್ನು ಸಲ್ಲಿಸಿರುವರು.

ಮುಂದುವರೆದು, ಮಾನ್ಯ ಕುಲಪತಿಗಳು ಮಾತನಾಡಿ, ಪದವಿ ಪರೀಕ್ಷೆಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ವಿಶ್ವವಿದ್ಯಾಲಯದ ಸಿಬಿಸಿಎಸ್ ನಿಯಮಾವಳಿಯ ಪ್ರಕಾರ ಗಣಕಯಂತ್ರದ ಪ್ರೋಗ್ರ್ಯಾಮ್‌ನ್ನು ರಚಿಸುವಂತೆ ತಿಳಿಸಿದರು.

<u>ನಿರ್ಣಯ:</u> ಚರ್ಚೆಯ ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಯು ಸಿಬಿಸಿಎಸ್ ನಿಯಮದಂತೆ ಕಂಪ್ಯೂಟರ್ ಪ್ರೋಗ್ರ್ಯಾಮ್‌ನ್ನು ಸರಿಪಡಿಸುವಂತೆ ಸರ್ವಾನುಮತದೊಂದಿಗೆ ಅನುಮೋದಿಸಿತು.

<u>ವಿಷಯ: ಸಂಖ್ಯೆ:7</u>: Lateral Entry to PG Programmes for the students who have pursued 4 years UG programme and also to start 4 years UG programmes with an exit option after 3rd year – reg.

<u>ನಿರ್ಣಯ:</u> ಈ ವಿಷಯದ ಬಗ್ಗೆ ಎಲ್ಲಾ ಅಧ್ಯಯನ ಮಂಡಳಿಗಳಲ್ಲಿ ವಿಸ್ತೃತವಾಗಿ ಚರ್ಚಿಸಿ ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲು ನಿರ್ಣಯಿಸಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಸಚಿವರು
21/11/2019.

ಸಹಿ/–
ಕುಲಪತಿಯವರು